ಐದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ,
ಶಿವಮೊಗ್ಗ (ಪೀಠಾಸೀನ, ಸಾಗರ)
ಎಸ್.ಸಿ. ನಂಃ 10006/2023

ಪಿರ್ಯಾದುದಾರರು : ಸೊರಬ ಪೊಲೀಸ್ ಠಾಣೆ

ವಿರುದ್ಧ

ಆರೋಪಿತರುಃ

1. ಅರುಣ ಬಿನ್ ಛತ್ರಪತಿ
   ವಯಸ್ಸು ಸುಮಾರು 25 ವರ್ಷ,
   ಕೂಲಿ ಕೆಲಸ,
2. ಛತ್ರಪತಿ ಬಿನ್ ಮಂಡಕ್ಕಿ ಹುಚ್ಚಪ್ಪ
   ವಯಸ್ಸು ಸುಮಾರು 51 ವರ್ಷ
   ವ್ಯವಸಾಯ ಕೆಲಸ,

   1 ಮತ್ತು 2 ನೇ ಆರೋಪಿತರ ವಾಸಃ
   ಯಲಸಿ ಗ್ರಾಮ, ಸೊರಬ ತಾಲ್ಲೂಕು.

## ದೋಷಾರೋಪಣೆ

ಪ್ರಭಾವತಿ ಜಿ., ಎಲ್,ಎಲ್.ಎಂ., 5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಶಿವಮೊಗ್ಗ (ಪೀಠಾಸೀನ ಸಾಗರ) ಆದ ನಾನು ಈ ಮೇಲ್ಕಂಡ ಆರೋಪಿತರಾದ ನಿಮ್ಮನ್ನು ಈ ಕೆಳಕಂಡ ಆರೋಪಗಳಿಗೆ ಗುರಿಪಡಿಸುವುದೇನೆಂದರೆ,

ಸೊರಬ ತಾಲ್ಲೂಕು, ಸೊರಬ ಪೋಲೀಸ್ ಠಾಣಾ ವ್ಯಾಪ್ತಿಯ ಯಲಸಿ ಗ್ರಾಮದಲ್ಲಿ ಸಾಕ್ಷಿ -1 ಮಾಲ್ತೇಶ್ ಮತ್ತು ಅವರ ಪಕ್ಕದ ಮನೆಯ ವಾಸಿಗಳಾದ ಆರೋಪಿತರಾದ ನಿಮಗೆ ಜಾಗದ ವಿಚಾರವಾಗಿ ತಕರಾರು ಇದ್ದು ಇದೇ ವಿವಾದದ ಹಿನ್ನೆಲೆಯಲ್ಲಿ ದಿನಾಂಕಃ 06.03.2022 ರಂದು ಸಂಜೆ 5-00 ಗಂಟೆ ಸಮಯದಲ್ಲಿ ಯಲಸಿ ಗ್ರಾಮದ ಲೋಕೇಶ ರವರ ಮನೆ ಹಿಂಭಾಗದ ಜಾಗದಲ್ಲಿ ಸಾಕ್ಷಿ 1 ರವರ ತಾಯಿ ಮಂಜುಳಮ್ಮರವರು ಸಗಣಿ

ಸಾರಿಸುತ್ತಿದ್ದಾಗ ಆರೋಪಿತರಾದ ನೀವು ನಮ್ಮ ಜಾಗದಲ್ಲಿ ಏಕೆ ಸಗಣಿ ಸಾರಿಸುತ್ತಿದ್ದೀಯಾ ಬೋಳಿ ಮುಂಡೆ, ಸೂಳೆ ಮುಂಡೆ ಅಂತ ಅವಾಚ್ಯವಾಗಿ ಬೈದು ಗಲಾಟೆ ಮಾಡಿದಾಗ ಸಾಕ್ಷಿ 1 ರವರು ಕೇಳಲು ಹೋಗಿದ್ದಕ್ಕೆ 1 ನೇ ಆರೋಪಿಯು ಸಾಕ್ಷಿ1 ರವರಿಗೆ ನೀನ್ಯಾರೋ ಬೋಳಿ ಮಗನೇ, ಅಂತ ಅವಾಚ್ಯವಾಗಿ ಬೈದು, ಆ ಮೂಲಕ ಭಾರತ ದಂಡ ಸಂಹಿತೆ ಕಲಂಃ 504 ಸಹಕಲಂ 34 ರ ಅನ್ವಯ ನೀವು ಶಿಕ್ಷಾರ್ಹ ಅಪರಾಧ ಮಾಡಿದ್ದೀರಿ ಮತ್ತು ಇದು ನನ್ನ ಸಂಜ್ಞೆಯೊಳಗೆ ಬರುತ್ತದೆ.

2 ನೇಯದಾಗಿ ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನಿಮ್ಮ ಪೈಕಿ 1 ನೇ ಆರೋಪಿಯು ಸಾಕ್ಷಿ 1 ರವರಿಗೆ ಕೈಯಿಂದ ಮೈಕೈ ಮೇಲೆ ಹೊಡೆದು, ಬಿಡಿಸಲು ಬಂದ ಸಾಕ್ಷಿ 2 ಲೋಕೇಶ ರವರಿಗೆ 2 ನೇ ಆರೋಪಿಯು ಕೈಯಿಂದ ಮೈಕೈ ಮೇಲೆ ಹೊಡೆದು ಸಾಮಾನ್ಯ ಸ್ವರೂಪದ ನೋವುಂಟು ಮಾಡಿ, ಆ ಮೂಲಕ ಭಾರತ ದಂಡ ಸಂಹಿತೆ ಕಲಂಃ 323 ಸಹಕಲಂ 34 ರ ಅನ್ವಯ ನೀವು ಶಿಕ್ಷಾರ್ಹ ಅಪರಾಧ ಮಾಡಿದ್ದೀರಿ ಮತ್ತು ಇದು ನನ್ನ ಸಂಜ್ಞೆಯೊಳಗೆ ಬರುತ್ತದೆ.

3 ನೇಯದಾಗಿ ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನಿಮ್ಮ ಪೈಕಿ 1 ನೇ ಆರೋಪಿಯು ಸಾಕ್ಷಿ 1 ರವರನ್ನು ಕೊಲೆ ಮಾಡುವ ಉದ್ದೇಶದಿಂದ ಕತ್ತಿಯನ್ನು ತಂದು ನಿನ್ನನ್ನು ಇವತ್ತು ಮುಗಿಸಿಬಿಡುತ್ತೇನೆ ಅಂತ ಕತ್ತಿಯಿಂದ ಸಾಕ್ಷಿ 1 ರವರ ಎಡಭಾಗದ ತಲೆಗೆ ಹೊಡೆದು ಮಾರಣಾಂತಿಕ ಹಲ್ಲೆ ಮಾಡಿ, ಆ ಮೂಲಕ ಭಾರತ ದಂಡ ಸಂಹಿತೆ ಕಲಂಃ 307 ಸಹಕಲಂ 34 ರ ಅನ್ವಯ ನೀವು ಶಿಕ್ಷಾರ್ಹ ಅಪರಾಧ ಮಾಡಿದ್ದೀರಿ ಮತ್ತು ಇದು ನನ್ನ ಸಂಜ್ಞೆಯೊಳಗೆ ಬರುತ್ತದೆ.

4 ನೇಯದಾಗಿ ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನಿಮ್ಮ ಪೈಕಿ 1 ನೇ ಆರೋಪಿಯು ಬಿಡಿಸಲು ಬಂದ ಸಾಕ್ಷಿ 2 ರವರಿಗೆ ಕತ್ತಿಯಿಂದ ಕುತ್ತಿಗೆ ಎಡಭಾಗ, ಭುಜಕ್ಕೆ ಹೊಡೆದು ಸಾಕ್ಷಿ 1 ಮತ್ತು ಸಾಕ್ಷಿ 2 ರವರಿಗೆ ಸಾಮಾನ್ಯ ಸ್ವರೂಪದ ಗಾಯಪಡಿಸಿ, ಆ ಮೂಲಕ ಭಾರತ ದಂಡ ಸಂಹಿತೆ ಕಲಂಃ 324 ಸಹಕಲಂ 34 ರ ಅನ್ವಯ ನೀವು ಶಿಕ್ಷಾರ್ಹ ಅಪರಾಧ ಮಾಡಿದ್ದೀರಿ ಮತ್ತು ಇದು ನನ್ನ ಸಂಜ್ಞೆಯೊಳಗೆ ಬರುತ್ತದೆ.

5 ನೇಯದಾಗಿ ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನಿಮ್ಮ ಪೈಕಿ 1 ನೇ ಆರೋಪಿಯು ಈ ದಿನ ಬದುಕಿದ್ದೀಯಾ ಇನ್ನೊಮ್ಮೆ ಸಿಕ್ಕರೆ ಜೀವ ಸಹಿತ ಬಿಡುವುದಿಲ್ಲವೆಂದು ಕೊಲೆ ಬೆದರಿಕೆ ಹಾಕಿ, ಆ ಮೂಲಕ ಭಾರತ ದಂಡ ಸಂಹಿತೆ ಕಲಂಃ 506 ಸಹಕಲಂ 34 ರ ಅನ್ವಯ ನೀವು ಶಿಕ್ಷಾರ್ಹ ಅಪರಾಧ ಮಾಡಿದ್ದೀರಿ ಮತ್ತು ಇದು ನನ್ನ ಸಂಜ್ಞೆಯೊಳಗೆ ಬರುತ್ತದೆ.

ಆದ್ದರಿಂದ ಸದರಿ ಆರೋಪಿತರಾದ ನೀವು ಈ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾಗತಕ್ಕದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕಃ 24 ನೇ ಅಕ್ಟೋಬರ್ ಮಾಹೆ, 2024 ನೇ ಇಸವಿ.

(ಪ್ರಭಾವತಿ ಜಿ)
ಐದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಶಿವಮೊಗ್ಗ, ಪೀಠಾಸೀನ (ಸಾಗರ).